

ಬದರಿಯಲ್ಲಿ ಸ್ಥಳೀಯರೊಂದಿಗೆ ಲೇಖಕರ ಉಭಯಕುಶಲೋಪರಿ

ಬಿಯಾಸ್ ಹೊಳೆದಡದ ನಗ್ಗರ್ ಪಟ್ಟಣದಲ್ಲಿ ಬಸ್ಸಿಗೆಂದು ಕಾಯುತ್ತಿದ್ದೆವು. ವಾರದಿಂದ ಆಧುನಿಕತೆ ನಾಗರಿಕತೆಯ ಸಂಕೇತಗಳಾದ ಟಾರುರಸ್ತೆಯನ್ನಾಗಲಿ ಬಸ್ಸುಕಾರುಗಳನ್ನಾಗಲಿ ಜನಜಂಗುಳಿಯನ್ನಾಗಲಿ ಕಂಡಿರಲಿಲ್ಲ. ಹಸಿರುಕಚ್ಚಿದ ಕಾಡು, ಕಣ್ಣುಕೋರೈಸುವ ಹಿಮ, ಮರಗಟ್ಟಿಸುವ ತಣ್ಣೀರು, ನಿರ್ಜನ ಹಳ್ಳಿಗಳು, ದಿನಾ ಹತ್ತು ಕಿಮೀ ನಡಿಗೆ, ಸಾಕುಸಾಕಾಗಿತ್ತು. ಕಡಲಿನ ಅಥವಾ ಕಾಡಿನ ಏಕಾಂತ, ಮೌನ ಮತ್ತು ಏಕತಾನವೆನಿಸುವ ಬಣ್ಣದ ಲೋಕದೊಳಗಿದ್ದಾಗ ಉಸಿರುಗಟ್ಟಿದ ಅನುಭವವೂ ಆಗುತ್ತದೆ. ಅಲ್ಲಿಂದ ಒಮ್ಮೆ ಹೊರಬಂದಾಗ ನಾಗರಿಕ ಲೋಕದ ರಸ್ತೆ ಬಸ್ಸು ಅಂಗಡಿ ಪೇಟೆಗಳು ವಿಚಿತ್ರವಾದ ಬಿಡುಗಡೆಯ ಹಿತ ಕೊಡುತ್ತವೆ. ಇದೇ ನಾಗರಿಕ ಲೋಕದಿಂದಲ್ಲವೇ ನಾವು ದಣಿದು ಹಿಮಾಲಯವನ್ನು ಹೊಕ್ಕಿದ್ದು ನೆಮ್ಮದಿಗಾಗಿ? ಜೀವನವೆಂದರೆ, 'ಇರುವುದೆಲ್ಲವ ಬಿಟ್ಟು ಇರದುದೆಡೆಗೆ ತುಡಿಯುವುದು' ಮಾತ್ರವಲ್ಲ. ಮತ್ತೆಮತ್ತೆ ಇರುವುದಕ್ಕೆ ಮರಳುವುದು ಕೂಡ. ನಮ್ಮ ತಂಡದಲ್ಲಿದ್ದ ಚೆನ್ನೈ ಹುಡುಗಿಯರು, ನಾಗರಿಕ ಲೋಕಕ್ಕೆ ಕರೆದೊಯ್ಯುವ ಮಾರ್ಗದರ್ಶಿಯಂತಿದ್ದ ಟಾರುರಸ್ತೆಗೆ ನಾಟಕೀಯವಾಗಿ ಬಾಗಿ ನಮಿಸಿದರು.

ನಮ್ಮ ಚೇಷ್ಟೆಗಳನ್ನು ನಿಂತು ನೋಡುತ್ತಿದ್ದ ಒಬ್ಬ ಮುದುಕ 'ನಿಮಗೆ ಹಿಮಾಚಲ ಹೇಗನಿಸಿತು?' ಎಂದು ಕೇಳಿದನು. ಕೆಲವರು 'ಬಾಪ್‌ರೇ ಏ ಥಂಡ್ ಸಂಭಾಲಾ ನಹಿಜಾತಿ' ಎಂದರು. ಮತ್ತೆ ಕೆಲವು 'ಸೂಪರ್' ಎಂದರು. ಮುದುಕನೆಂದ: ''ನಿಮ್ಮಂತೆಯೇ ಒಬ್ಬ ಬಿಳಿಯ ಮನುಷ್ಯ ಹಿಮಾಲಯ ನೋಡಲು ಬಂದ. ಹೋಗುವಾಗ ಇಲ್ಲಿಂದ ಬೆಲೆಬಾಳುವ ವಸ್ತುವನ್ನು ತನ್ನ ದೇಶಕ್ಕೆ ಕೊಂಡೊಯ್ಯಬೇಕು ಅನಿಸಿ ಕೇಳಿದ: 'ನಿಮ್ಮ ದೇಶದ ಅತ್ಯುತ್ತಮ ವಸ್ತು ಯಾವುದು?' ಆಗ ನಮ್ಮ ಹಿರೀಕರು ಹೇಳಿದರಂತೆ: ನೀರು, ಗಾಳಿ ಮತ್ತು ಜನರ ವಿಶ್ವಾಸ''.

ನಿಜ, ಹಿಮಾಚಲದಲ್ಲಿ ಸಿಗುವ ಈ ಶ್ರೇಷ್ಠವಸ್ತುಗಳು ಹೊರಗೆ ಖರೀದಿಸಲು ಬಾರದವು. ಹಿಮಾಲಯವನ್ನು ನದಿಗಳ ಸೆಳವಿನಿಂದ ಅದರ ಪರ್ವತದ ವಿಸ್ತಾರ ಎತ್ತರಗಳಿಂದ ನೋಡಿದರೆ ಒಂದು ಅನುಭವ; ಜನರ ವಿಶ್ವಾಸದಿಂದ, ನೀರಿನ ಸ್ವಚ್ಛತೆಯಿಂದ, ಹವೆಯ ತಂಪಿನಿಂದ ಅಳೆದರೆ ಇನ್ನೊಂದೇ ಅನುಭವ. ನಿಜವಾದ ಹಿಮಾಲಯವೆಂದರೆ ಈ ಎರಡೂ ಅನುಭವ ಲೋಕಗಳು ಏಕೀಭವಿಸಬೇಕು. ಹಿಮಾಲಯವೆಂದರೆ ಹಿಮಾಚ್ಛಾದಿತ ಶಿಖರಗಳ ಕರೆ ಮತ್ತು ಆಳವಾದ ಕಮರಿಗಳು ಮಾತ್ರವಲ್ಲ. ಅಲ್ಲಿ ಬದುಕುವ ಕುರಿಗಾಹಿಗಳು, ದನಗಾಹಿಗಳು, ರೈತರು, ಪೋರ್ಟರುಗಳು, ಗೈಡುಗಳು, ರೈತರು ಕೂಡ. ಹಿಮಾಲಯವು ಭವ್ಯವಾಗಿ ಕಾಣುವುದು ಬೃಹತ್ತಿನಿಂದಲ್ಲ. ತನ್ನೊಳಗಿನ ಜನಜೀವನದಿಂದ. ನಿತ್ಯ ಹೋರಾಟದಿಂದ. ಹಿಮಾಲಯದ ಜನ ಮೂರು ತಿಂಗಳು ಅಗಾಧ ಹಿಮದೊಳಗೆ ಸಮಾಧಿಯಾಗಿ ಬದುಕಿರುವ ಶರಾಲ್ ಗಿಡಗಳಂತೆ; ಹತ್ತುಸಾವಿರ ಅಡಿಯ ಮೇಲೆ ಪರ್ವತವನ್ನು ಆವರಿಸಿಕೊಳ್ಳುವ ಬಂಬಲೂ ಹೂವುಗಳಂತೆ ನನಗೆ ತೋರುವರು.

ಹಿಮಾಲಯಕ್ಕೆ ಒಮ್ಮೆ ಹೋಗಿಬಂದರೆ, ಅದು ತನ್ನ ಜನ, ಪರ್ವತ, ಕಾಡು, ಹೊಳೆ, ಕಣಿವೆ, ಪಶುಪಕ್ಷಿಗಳ ಸಮೇತ ನಮ್ಮ ಭಾವಕೋಶದ ಭಾಗವಾಗುತ್ತದೆ. ಈಚೆಗೆ ಹಿಮಾಚಲದಲ್ಲಿ ಹಿಮಪಾತವಾಯಿತು. ಮಳೆಯಿಲ್ಲದೆ ಸೇಬುಗಳು ದಪ್ಪನಾಗುತ್ತಿಲ್ಲ ಎಂಬ ಸುದ್ದಿಯಿತ್ತು. ನಮ್ಮದೇ ಸೇಬುತೋಟ ಒಣಗುತ್ತಿರುವಂತೆ ಬಾನು ಮರುಗಿದಳು. ಜೋಶಿಮಠ ಕುಸಿಯುತ್ತಿದೆ ಎಂದಾಗ, ನನ್ನೆದೆ ದುಗುಡದಿಂದ ತುಂಬಿತು. ಈಗಲೂ ಹಿಮಾಲಯವೆಂದರೆ, ಹಿಮಪಾತದಲ್ಲಿ ನಮ್ಮ ಕೈಹಿಡಿದು ನಡೆಸಿದ ಸಂಕರಿಯ ಶಾರೂಕ್, ಛನಾಲಿನ ದಾರಿತೋರುಗ ಗುಪ್ತಾರಾಮ, ಚಂದ್ರಖಾನಿಯ ಸೈದರ್‌ಸಿಂಗ್ ಮುಂತಾದವರ ವಿಶ್ವಾಸ ದುಡಿಮೆ ನೆನಪಾಗುತ್ತದೆ. ದೂರದ ಮನೆಗಳಲ್ಲಿ ತಮಗಾಗಿ ಕಾದಿರುವ ಜೀವಗಳಿಗಾಗಿ ನಮ್ಮ ಜೊತೆ ಚಳಿಯಲ್ಲಿ ದುಡಿವ ನೇಪಾಳಿ ಕಾಶ್ಮೀರಿ ಪೋರ್ಟರುಗಳ ಸಹನೆ ನೆನಪಾಗುತ್ತದೆ. ಮತ್ತೆಮತ್ತೆ ಅಲ್ಲಿಗೆ ಹೋಗಬೇಕೆಂದು ಜೀವ ತುಡಿಯುತ್ತದೆ.

ಪ್ರತಿಕ್ರಿಯಿಸಿ: **feedback@sudha.co.in**

